ಅಧ್ಯಕ್ಷರು: ಪ್ರಾರಂಭದಲ್ಲಿ ವಿದ್ಯುತ್ load shedding ಬಗ್ಗೆ ಮಾನ್ಯ ಮಂತ್ರಿಯವರು Statement ಮಾಡುತ್ತಾರೆ.

1. ಹೇಳಿಕೆ

ವಿಷಯ: ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿ ಕುರಿತು

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :–

ರಾಜ್ಯದ ಎಲ್ಲೆಡೆ ಉತ್ತಮ ಮಳೆಯಾಗುತ್ತಿರುವುದು ಹರ್ಷದ ಸಂಗತಿ. ಕಳೆದ 3 ದಿನಗಳಿಂದ ಜಲಾಶಯಗಳಿಗೆ ಉತ್ತಮ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು. ನಮ್ಮ ವಿದ್ಯುತ್ ಕ್ಷೇತ್ರದ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಬಂದಿದೆ.

ಜುಲೈ 31 ರಂದು ಪ್ರಮುಖ ಜಲಾಶಯಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೀಗಿದೆ:–

		ಒಳಹರಿವು
ಲಿಂಗನಮಕ್ಕಿ	: 1410 ಮಿ.ಯು.	31635 ಕ್ಯೂಸೆಕ್ಸ್
ಸೂಪ	: 692 ಮಿ.ಯು.	27022 ಕ್ಯೂಸೆಕ್ಸ್
ಮಾಣಿ	: 290 ಮಿ.ಯು.	6188 ಕ್ಯೂಸೆಕ್ಸ್
ಒಟ್ಟು	2392 ಮಿ.ಯು.	

- ಆದರೆ, ಕಳೆದ ವರ್ಷ ಇದೇ ದಿನದಲ್ಲಿ ಈ ಮೂರು ಜಲಾಶಯಗಳಿಂದ 5860 ಮಿ.ಯು.ಗಳಿಗೆ ಬೇಕಾದಷ್ಟು ನೀರಿನ ಶೇಖರಣೆ ಇತ್ತು.
- ಮತ್ತೊಂದು ಸಂತಸದ ಸಂಗತಿ ಎಂದರೆ, ಬಳ್ಳಾರಿಯ ಶಾಖೋತ್ಪನ್ನ ಘಟಕ–1, ಯಶಸ್ವಿಯಾಗಿ ಕಾರ್ಯಾರಂಭ ಮಾಡಿದೆ. ಆಗಸ್ಟ್ 1ರಿಂದ ಬಿ.ಟಿ.ಪಿ.ಎಸ್.–1 ರಿಂದ 100 ಮೆ.ವ್ಯಾ. (2.5 ಮಿ. ಯುನಿಟ್) ವಿದ್ಯುತ್ ಉತ್ಪಾದನೆ ಆಗಲಿದ್ದು, ನಮ್ಮ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗಿಸಲಿದೆ.
- ರಾಯಚೂರಿನಲ್ಲಿನ ಎಲ್ಲಾ 7 ಘಟಕಗಳನ್ನು ಸುಸ್ಥಿತಿಯಲ್ಲಿಡುವ ಕಾರ್ಯ ನಡೆದಿದ್ದು, ಆಗಸ್ಟ್‌ನಲ್ಲಿ ಈ ಘಟಕಗಳಿಂದ 32 ಮಿ.ಯು.ಗಳನ್ನು ಉತ್ಪಾದಿಸುವ ಗುರಿ ಹೊಂದಿದೆ. ಪವನ (Wind) ವಿದ್ಯುತ್‌ನಿಂದ 10 ಮಿ.ಯು.ಗಳನ್ನು ಉತ್ಪಾದಿಸಲಿದ್ದೇವೆ. ಜಲವಿದ್ಯುತ್‌ನಿಂದ 15 ಮಿ.ಯು. ಉತ್ಪಾದನೆಯಾಗಲಿದೆ.
- ಕೇಂದ್ರದ ಗ್ರಿಡ್‌ನಿಂದ 35 ಮಿ.ಯು. ಪಡೆಯಲು ಉದ್ದೇಶಿಸಿದ್ದೇವೆ. ಹೀಗಾಗಿ, ನಮಗೆ ಪ್ರತಿನಿತ್ಯ 105 ಮಿ.ಯು.ನಷ್ಟು ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸ್ಥಿತಿ ಇದೆ. ರಾಜ್ಯದಲ್ಲಿ ಮಳೆ ಆಗುತ್ತಿರುವುದರಿಂದ ವಿದ್ಯುತ್ ಬಳಕೆಯ ಪ್ರಮಾಣದಲ್ಲೂ ಗಣನೀಯ ಇಳಿಕೆ ಕಂಡು ಬಂದಿರುವುದು ಗಮನಾರ್ಹ.

- ಪರಿಸ್ಥಿತಿಯನ್ನು ಅವಲೋಕಿಸಲು 29ರ ಬೆಳಿಗ್ಗೆ ಸಚಿವ ಸಂಪುಟ ಉಪ ಸಮಿತಿ (ವಿದ್ಯುತ್) ಸಭೆ ನಡೆಸಿತು. ಎಲ್ಲಾ ಸಾಧಕಗಳನ್ನು ಚರ್ಚಿಸಿತು. ರಾಜ್ಯದ ಜನತೆಗೆ ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚು ತೊಂದರೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಅದರಂತೆ.
  - ಯೋಜಿತ ಲೋಡ್ ಶೆಡ್ಡಿಂಗ್ ಶೇಕಡ 20 ರಷ್ಟು ಇದ್ದದ್ದನ್ನು ಶೇಕಡ 15 ಕ್ಕೆ ಇಳಿಸಲು ನಿರ್ಧರಿಸಿದೆ.
  - ವಿದ್ಯುತ್ ವಿತರಣಾ ಕಂಪನಿಗಳಿಗೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಹಂಚಿಕೆ ಮಾಡುವುದು.
  - ಆಗಸ್ಟನಲ್ಲಿ (ಸುಧಾರಣೆ ಆಗಿರುವುದರಿಂದ) ಪವರ್ ಕಟ್ ಮಾಡದೇ ಇರಲು ನಿರ್ಧರಿಸಿದೆ.
  - ಕೈಗಾರಿಕೋದ್ಯಮಿಗಳಿಗೆ ಹೆಚ್ಚಿಗೆ ತೊಂದರೆಯಾಗದಂತೆ ವಾರಕ್ಕೆ ಒಮ್ಮೆ (ಭಾನುವಾರ ಹೊರತುಪಡಿಸಿ) ಹೆಚ್.ಟಿ.ಲೈನ್ ನಿಲ್ಲಿಸಲು ತೀರ್ಮಾನಿಸಿತು. ಈ ಬಗ್ಗೆ ಕೈಗಾರಿಕೋದ್ಯಮಿಗಳ ಸಭೆ ನಡೆಸಿ ಅವರ ಮನವೊಲಿಸಿ, ಈ ಕ್ರಮದ ಅನಿವಾರ್ಯತೆ ವಿವರಿಸಲು ತೀರ್ಮಾನಿಸಿತು.
  - ಖಾಸಗಿ ವಿದ್ಯುತ್ ಉತ್ಪಾದಕರಿಂದ ಜಿಂದಾಲ್, ಟಾಟಾ ಹಾಗೂ ಛತ್ತೀಸಘಡದಿಂದ ಹೆಚ್ಚಿಗೆ ವಿದ್ಯುತ್ ಪಡೆಯುವುದನ್ನು ಮುಂದುವರೆಸಲಾಗುವುದು.
  - ಆದರೆ Energy Exchange ನಿಂದ Spot Purchase ಮಾಡುವುದನ್ನು ನಿಲ್ಲಿಸಲು ನಿರ್ಧರಿಸಲಾಯಿತು.

ಈ ಮೇಲ್ಕಾಣಿಸಿದ ಕ್ರಮಗಳ ಮೂಲಕ ರಾಜ್ಯದ ಜನರಿಗೆ ಹೆಚ್ಚು ತೊಂದರೆ ಆಗದಂತೆ ವಿದ್ಯುತ್ ಒದಗಿಸಲು ನಿರ್ಧರಿಸಲಾಗಿದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ:

ವಿಷಯ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಮುಖ್ಯವಾದ ವಿಷಯ, ಅಂದರೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಚರ್ಚಿಸಲು ತಮಗೆ ನಿಲುವಳಿ ಸೂಚನೆ ಮೇಲೆ ಪ್ರಸ್ತಾಪಿಸಲು ಕೇಳಿಕೊಂಡಿದ್ದೇನೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು